(SRI AZEEZ SAIT)

Corporation will take over. At the same time I can see that things are going on in a proper way and we have summoned records. Let us see that the matter is expedited. If Governments' intervention is necessary, I will certainly do it.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮೀ, ಈಗ ನಮ್ಮಲ್ಲಿರುವ ಅಗ್ರೋ ಇಂಡಸ್ಟ್ರೀಸ್‌ನಲ್ಲಿ ಸಾಕಷ್ಟು ಹಣ ಇದೆ. ಇವರಿಗೆ ಟ್ರಾಕ್ಟರುಗಳು ಇತ್ಯಾದಿ ಮೆಷಿನರಿಗಳು ಬೇಕಾಗುತ್ತವೆ. ಇಲ್ಲಿಲ್ಲ ತಯಾರಾಗುವ ಅಗ್ರಿಕಲ್ಚರಲ್ ಇಂಪ್ಲಿಮೆಂಟುಗಳನ್ನು ಇವರೇ ತೆಗೆದುಕೊಂಡರೆ ಇಲ್ಲಿ ಹೆಚ್ಚು ಉತ್ಪಾದನೆ ಮಾಡಲು ಅವಕಾಶವಾಗುವುದಿಲ್ಲವೇ ? ಇದು ಸರಿಯಾಗಿ ಕೆಲಸ ಮಾಡಲು ತಕ್ಕ ತೀರ್ಮಾನವನ್ನು ತೆಗೆದುಕೊಂಡು ಇಲ್ಲಿನ ಕೆಲಸಗಾರರಿಗೆ ಸಹಾಯ ಮಾಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್.—ಯಾವುದಾದರೂ ಇಂಡಸ್ಟ್ರಿಯಲ್ ಕಾರ್ಪೊರೇಷನ್ ತೆಗೆದುಕೊಂಡು ಅದರಿಂದ ಪ್ರಯೋಜನವಾಗುವಂತಿದ್ದರೆ ಅದರ ಪ್ರೊಪೋಸ್ ಅಂಡ್ ಕಾನ್ಸ್‌ಗಳೇನು ? ಇವುಗಳನ್ನೆಲ್ಲಾ ವಿಚಾರಮಾಡಿ ನೋಡಬೇಕಾಗುತ್ತದೆ, ಇದರ ಬಗ್ಗೆ ರಾಜ್ಯದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಶಿಫಾರಸು ಮಾಡಬೇಕೆಂದು ಹೇಳಿದರು. ಅಂತಹ ಶಿಫಾರಸು ಕಳುಹಿಸಲು ನನ್ನದೇನೂ ಅಭ್ಯಂತರವಿಲ್ಲ, ನನ್ನ ಮಿತ್ರರಾದ ವ್ಯವಸಾಯ ಮಂತ್ರಿಗಳೊಡನೆ ಇದರ ಬಗ್ಗೆ ಮಾತನಾಡಿ ಇದನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

PAPERS LAID ON THE TABLE

Sri D. DEVARAJ URS (Chief Minister).—I lay on the Table Annual Report of the Mysore Public Service Commission and Government Memorandum for the year 1970-71 under Article 323(2) of the Constitution of India.

MADAM SPEAKER.—The Report is laid.

Sri K. H. PATIL (Minister for Agriculture and Forest).—Madam...

A Point of Order Opposing the laying of Notification

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ.....

Sri D. B. KALMANKAR.—On a point of order, Sir.....

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಮಿತ್ರರಾದ ಶ್ರೀ ಕಲ್ಮಂಕರ್‌ರವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. ಇಂತಹ ಒಂದು ವರದಿಗೆ ಅನುಮತಿ ಕೊಡುವುದಕ್ಕೆ ಸರಕಾರದ ಕಾನೂನಿದೆಯೇ ? ಕಾನೂನು ಇಲ್ಲದೆ ಇಂತಹ ಒಂದು ನಿರ್ಣಯ ತರುವುದಕ್ಕೆ ಸರಕಾರಕ್ಕೆ ಅಧಿಕಾರವಿದೆ ಇದನ್ನು ತಡೆಗಟ್ಟಲಿಕ್ಕೆ ವಿರೋಧ ಪಕ್ಷದವರಿಗೆ ಯಾವುದೇ ತರಹದ ಹಕ್ಕಿಲ್ಲ ಎಂದು ಅವರು ಹೇಳಬಹುದು. ಅದನ್ನು ನಾನು ತಿಳಿದುಕೊಂಡಿದ್ದೇನೆ. ಇದು ಕ್ರಮಬದ್ಧವಾಗಿಲ್ಲ. ಅವರ ಪಾಯಿಂಟ್ ಆಫ್ ಆರ್ಡರ್ ಏನು ಎನಾವುದೂ ನನಗೆ ಗೊತ್ತಿದೆ. ಸೆಕ್ಷನ್ 54ರ ಪ್ರಕಾರ ಯಾವುದೇ ಇನ್‌ಸ್ಟಿಟ್ಯೂಷನ್‌ನನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಂಡ ಕಾಲದಲ್ಲಿ ಇಂತಹ ಒಂದು ನೋಟಿಫಿಕೇಷನ್ ಇಡಬೇಕಾಗಿತ್ತು ಎನ್ನುವುದಕ್ಕೆ ಕಾಯಿದೆ ಇರಬೇಕು. ಆದರೆ ನನ್ನ ಮುಂದೆ ಅಂತಹ ಯಾವ ಕಾಯಿದೆಯೂ ಇಲ್ಲ ಈ ರೀತಿ ನಾನು ಸರಕಾರಕ್ಕೆ ಕೇಳಬೇಕಾದರೆ ಅನೇಕ ಇನ್‌ಸ್ಟಿಟ್ಯೂಷನ್‌ಗಳು ಕಳೆದ ಒಂದು ವರ್ಷದಲ್ಲಿ ಯಾವ ರೀತಿ ಕೆಲಸ ಮಾಡಿಕೊಂಡು ಬರುತ್ತಿವೆ ಎನ್ನುವುದನ್ನು ನಾನು ನೋಡುತ್ತಿದ್ದೇನೆ. ಅದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದಕ್ಕಾಗಿ ನೀವು ನಮಗೆ ಸ್ವಲ್ಪ ಅವಕಾಶ ಕೊಟ್ಟು ಇಲ್ಲಿ ಸಹಾಯಮಾಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ನಮ್ಮ ಕಷ್ಟವನ್ನು ಸಭೆಯ ಮುಂದೆ